

# ನವಿಲಿನ ನರ್ತನ ಫ್ಯಾಷನ್ ಲೋಕದ ಸುಲ್ತಾನ!

**ಒಡವೆ, ಉಡುಪು, ಮೆಹೆಂದಿಗಳಲ್ಲಿ ನವಿಲಿನ ವಿನ್ಯಾಸ ಸಖತ್ ಸದ್ದು ಮಾಡುತ್ತಿದೆ. ಎಂಬ್ರಾಯಿಡರಿ ಬ್ಲೌಸ್‌ನಲ್ಲಿ, ಸೀರೆಯಲ್ಲಿ, ಕಿವಿಯೋಲೆಗಳಲ್ಲಿ ನವಿಲಿನ ವಿನ್ಯಾಸ ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ. ಹಕ್ಕಿ–ಪಕ್ಷಿಗಳ ಚಿತ್ತಾರ ಬಹಳ ಜನಪ್ರಿಯತೆ ಗಳಿಸುತ್ತಿದೆ.**



■ ಕವಿತಾ ವಿನು ಭಟ್ಟ

ಫ್ಯಾಷನ್ ಜಗತ್ತಿನಲ್ಲಿ ನಿತ್ಯ ಹೊಸತನದ ಹುಡುಕಾಟ ಇದ್ದೇ ಇರುತ್ತದೆ. ಹೂವು, ಹಣ್ಣು, ಪಕ್ಷಿ, ಪ್ರಕೃತಿ ಎಲ್ಲವೂ ಒಡವೆ, ವಸ್ತ್ರಗಳಲ್ಲಿ ರಾರಾಜಿಸುತ್ತವೆ.. ಹೀಗೆ ತಯಾರಾದ ಹೊಸ ಡಿಸೈನ್‌ಗಳಲ್ಲಿ ಎಷ್ಟೋ ಮೂಲೆಗುಂಪಾಗುತ್ತವೆ. ಮತ್ತೊಂದಿಷ್ಟು ಜನಮೆಚ್ಚುಗೆ ಪಡೆದು ಮಾರುಕಟ್ಟೆಯಲ್ಲಿ ಶಾಶ್ವತ ಸ್ಥಾನ ಗಿಟ್ಟಿಸುತ್ತವೆ. ಹೀಗೆ ಫ್ಯಾಷನ್ ಪ್ರಪಂಚದಲ್ಲಿ ಸುಲ್ತಾನ್‌ನಂತೆಮೆರೆಯುತ್ತಿರುವ ಪೀಕಾಕ್ ಡಿಸೈನ್‌ಗಳ ಬಗ್ಗೆ ಒಂದಿಷ್ಟು.

ನಮ್ಮ ದೇಶದ ರಾಷ್ಟ್ರೀಯ ಪಕ್ಷಿ ನವಿಲಿನ ಬಣ್ಣ, ಚಂದದ ಗರಿಗಳು, ಅದರ ನಡಿಗೆ, ಕುಣಿತ, ನೃತ್ಯ ಎಲ್ಲವೂ ಮನಮೋಹಕ. ನವಿಲಿನ ಪ್ರಿಂಟ್ ಇರುವ ಸೀರೆ, ಡ್ರೆಸ್‌ಗಳು ಎಲ್ಲ ವಯೋಮಾನದ ಮಹಿಳೆಯರಿಗೆ ಅಚ್ಚುಮೆಚ್ಚು. ವಧುವಿನ ಕೈಗೆ ನವಿಲಿನ ಮೆಹೆಂದಿ, ನವಿಲಿನ ಎಂಬ್ರಾಯಿಡರಿ ಇರುವ ಬ್ಲೌಸ್, ನವಿಲಿನದ್ದೇ ಡಿಸೈನ್ ಆಭರಣ ಇತ್ತೀಚಿನ ದಿನಗಳಲ್ಲಿ ಹೆಚ್ಚು ಫೇಮಸ್ ಎನ್ನುತ್ತಾರೆ ವೆಡ್ಡಿಂಗ್ ಡಿಸೈನರ್‌ಗಳು.

## ನವಿಲಿನ ಎಂಬ್ರಾಯಿಡರಿ ಬ್ಲೌಸ್

ಮದುವೆ ಮತ್ತು ಇನ್ನಿತರ ಶುಭ ಸಮಾರಂಭಗಳಿಗೆ ಎಂಬ್ರಾಯಿಡರಿ ಕಡ್ಡಾಯ ಎನ್ನುವ ಟ್ರೆಂಡ್ ಶುರುವಾಗಿದೆ. ಬ್ಲೌಸ್‌ಗಳಿಗೆ ಎಂಬ್ರಾಯಿಡರಿ ಇಲ್ಲದೆ ಮದುವೆ, ರಿಸೆಪ್ಷನ್ ಅಟೆಂಡ್ ಮಾಡಲು ಮುಜುಗರಪಡುವಂತಾಗಿದೆ. ಈ ಪೀಕಾಕ್ ಎಂಬ್ರಾಯಿಡರಿ ಎಲ್ಲ ವಯೋಮಾನದ ಮಹಿಳೆಯರಿಗೆ ಸೂಟ್ ಆಗುತ್ತದೆ. ಅಲ್ಲದೆ ರೇಷ್ಮೆ, ಖಾದಿ, ಕಾಟನ್ ಸಿಲ್ಕ್, ಕಾಟನ್ ಸಾರಿ, ಇಳಕಲ್ ಸೀರೆ, ಕೈಮಗ್ಗದ ಸೀರೆ ಎಲ್ಲದಕ್ಕೂ ರಿಚ್ ಮತ್ತು ಎಲಿಗೆಂಟ್ ಲುಕ್ ನೀಡುತ್ತವೆ. ರೇಷ್ಮೆ ಸೀರೆಗಳಿಗೆ ಆರಿ ವರ್ಕ್ ಚಂದ. ಖಾದಿ, ಕಾಟನ್, ಕೈಮಗ್ಗದ ಸೀರೆಗಳಿಗೆ ಸ್ಯಾಟಿನ್ ಸ್ಟಿಚ್ ಅದ್ಭುತವಾಗಿ ಕಾಣುತ್ತದೆ. ರೇಷ್ಮೆ ಸೀರೆಗಳಿಗೆ ಬ್ಯಾಕ್ ನೆಕ್ ಮತ್ತು ಸ್ಲೀವ್‌ಗಳ ಮೇಲೆ ಬಗೆ ಬಗೆಯ ನವಿಲಿನ ವಿನ್ಯಾಸಗಳು ಸೀರೆಯ ಬೆಲೆಯನ್ನು ದುಪ್ಪಟ್ಟುಗೊಳಿಸುತ್ತವೆ. ಕಸೂತಿ ಹಾಕುವಾಗ ದಾರದ ಆಯ್ಕೆ ರವಿಕೆಯ ಬಣ್ಣಕ್ಕೆ ಹೊಂದುವಂತಿರಬೇಕು. ರೇಷ್ಮೆ ದಾರದ ಕಸೂತಿ ಉತ್ತಮ ಹೊಳಪು ಹೊಂದಿದ್ದು, ಜೊತೆಗೆ ಸಣ್ಣ ಮುತ್ತುಗಳು, ಕುಂದನ್, ಕ್ರಿಸ್ಟಲ್ ಸ್ಟೋನ್ಸ್ ಬಳಕೆ ಮಾಡಬಹುದು. ಡಿಸೈನರ್ ಮತ್ತು ಟೇಲರ್‌ಗಳ ಪ್ರಕಾರ ಹ್ಯಾಂಡ್‌ಮೇಡ್ ಡಿಸೈನ್‌ಗಳಿಗೆ ಬೇಡಿಕೆ ಹೆಚ್ಚು. ಆರಿ ವರ್ಕ್‌ನಂತೇ ಜರ್ದೋಸಿ ವರ್ಕ್ ವೆಡ್ಡಿಂಗ್ ಫಂಕ್ಷನ್‌ಗಳಿಗೆ ರಿಚ್ ಲುಕ್ ಕೊಡುತ್ತದೆ.

## ಮೆಹೆಂದಿಯಲ್ಲೂ ನವಿಲು

ಸಮಾರಂಭಗಳಲ್ಲಿ ಸೀರೆ, ಒಡವೆಗಳಷ್ಟೇ ಪ್ರಾಧಾನ್ಯ ಮೆಹೆಂದಿಗೂ ಇದೆ. ಹೆಣ್ಣು ಮಕ್ಕಳ ಕೈತುಂಬ ಚಂದದ ಕೆಂಪನೆಯ ರಂಗು ಸಮಾರಂಭದ ಕಳೆ ಹೆಚ್ಚಿಸುತ್ತದೆ. ಮದುವೆ, ರಿಸೆಪ್ಷನ್‌ಗಳಿಗಷ್ಟೇ ಸೀಮಿತವಾಗಿದ್ದ ಮೆಹೆಂದಿ ಇದೀಗ ಹಬ್ಬ ಹರಿದಿನಗಳಲ್ಲಿ ಸರ್ವೇಸಾಮಾನ್ಯ ಎನಿಸಿದೆ. ಅದೆಷ್ಟೋ ಮೆಹೆಂದಿ ಡಿಸೈನ್‌ಗಳ ಮಧ್ಯೆ ಈ ಪೀಕಾಕ್ ಮೆಹೆಂದಿ ತನ್ನದೇ ಛಾಪು ಮೂಡಿಸಿರುವುದಂತೂ